ಎತ್ತಿದರು : "ಆತ್ಯಂತಿಕ ಸತ್ಯದ ಸ್ವರೂಪವೇನು? ಮಾನವನ ನೈಜ ಸ್ವರೂಪವೇನು? ಜೀವನವೆಂದರೆ ಏನು? ಜೀವವು ಮತ್ತೆ ಮತ್ತೆ ಉದ್ಭವಿಸುವುದರ ಮೂಲ ಅದಾವುದು? ಪರಿಪೂರ್ಣ ಆನಂದದ ನೈಜ ಸೆಲೆ ಯಾವುದು?" – ಈ ಬಗೆಯ ಆಧ್ಯಾತ್ಮಿಕ ಪ್ರಶ್ನೆಗಳ ಸರಣಿಯಿಂದಲೇ ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ನೂತನ ಯುಗವೊಂದು ಆರಂಭ ಗೊಂಡಿತು.

ಅನಂತರ, ಕ್ರಿ.ಪೂ. ಆರನೆಯ ಶತಮಾನದಲ್ಲಿ ಭಗವಾನ್ ಬುದ್ಧನು ಮತ್ತೊಂದು ಪ್ರಶ್ನೆಯನ್ನು ಮುಂದಿಟ್ಟನು. ಮಾನವನ ಸಂಕಷ್ಟಗಳಿಗೆ ಮೂಲಕಾರಣ ಯಾವುದು ಎನ್ನುವುದೇ ಆ ಪ್ರಶ್ನೆ. ಇದರೊಂದಿಗೆ ಅವನು ಇನ್ನೊಂದು ಯುಗವನ್ನು ಉದ್ಘಾಟಿಸಿದನು. ಅಲ್ಲಿಂದ ಸುಮಾರು ಒಂದು ಸಾವಿರ ವರ್ಷಗಳವರೆಗೆ ವೈದಿಕ ಮತ್ತು ಬೌದ್ಧ ಆದರ್ಶಗಳೆರಡೂ ಸಮಾನಾಂತರ ಪ್ರವಾಹಗಳಾಗಿ ಭಾರತದಲ್ಲಿ ಹರಿದವು. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಶ್ರೀಶಂಕರಾಚಾರ್ಯರು ಅವತರಿಸಿ, ಅದ್ವೈತ ಸಿದ್ಧಾಂತದ ಶ್ರೇಷ್ಠತೆಯನ್ನು ಸ್ಥಾಪಿಸುವ ತನಕ ಈ ಪ್ರಕ್ರಿಯೆಯು ನಡೆದುಬಂತು. ಇದರೊಂದಿಗೆ ಇನ್ನೊಂದು ಯುಗದ ಅವತರಣವೂ ಆಯಿತು. ಹಾಗೆಯೇ ೧೧ನೇ ಶತಮಾನದಲ್ಲಿ ಇಸ್ಲಾಂ ಧರ್ಮವು ಭಾರತವನ್ನು ಪ್ರವೇಶಿಸಿತು. ಅದರೊಂದಿಗೆ ಭಾರತೀಯ ಸಂಸ್ಕೃತಿಯ ಆದರ್ಶಸ್ವರೂಪದಲ್ಲಿ ಬಹುಮುಖ್ಯ ಸ್ಥಿತ್ಯಂತರವೊಂದು ಘಟಿಸಿತು.

ಭಾರತೀಯ ಸಂಸ್ಕೃತಿಯಲ್ಲಿ ಇವೆಲ್ಲಕ್ಕಿಂತ ಬಹುಮುಖ್ಯವಾದ ಸ್ಥಿತ್ಯಂತರವಾದದ್ದು ಹದಿನೆಂಟನೆಯ ಶತಮಾನದಲ್ಲಿ, ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಅದರ ಮುಖಾಮುಖಿಯಾದಾಗ. ಪಾಶ್ಚಾತ್ಯ ಸಂಸ್ಕೃತಿಯ ಮೂರು ಮುಖ್ಯ ಅಂಶಗಳು ಭಾರತೀಯ ಸಂಸ್ಕೃತಿಯ ಮೇಲೆ ಸವಾಲುಗಳನ್ನು ಎಸೆದವು: ಅವೆಂದರೆ, ೧. ಸಾಂಪ್ರದಾಯಿಕ ಧಾರ್ಮಿಕ ನಂಬಿಕೆಗಳನ್ನು ಪ್ರಶ್ನಿಸಲು ತೊಡಗಿದ ಭೌತಿಕ ವಿಜ್ಞಾನ, ೨. ಜಾತಿ ಪದ್ಧತಿಯಲ್ಲಿ ಬಂಧಿತವಾಗಿ ಅಸಮಾನತೆ ಮತ್ತು ಸಾಮಾಜಿಕ ಅನ್ಯಾಯ ವನ್ನು ಆಧರಿಸಿದ್ದ ಭಾರತೀಯ ಸಮಾಜಕ್ಕೆ ವಿಭಿನ್ನವಾಗಿರುವ, ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳನ್ನು ಆಧರಿಸಿದ ಮುಕ್ತ ಸಮಾಜದ ಪರಿಕಲ್ಪನೆ ಮತ್ತು ೩. ಪಾಪಿಗಳು, ಬಡವರು, ತುಳಿಯಲ್ಪಟ್ಟವರು ಮತ್ತು ರೋಗಿಗಳ ಮುಕ್ತಿದಾತನೆಂದು ಬಿಂಬಿಸಲ್ಪಟ್ಟ ಭಗವಂತನ ಕಲ್ಪನೆ. ಇಂತಹ ಸಂಕ್ರಮಣದ ಕಾಲದಲ್ಲಿ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಅವತರಿಸಿದರು; ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದರು.

೧೮೮೧ನೆಯ ಇಸವಿ. ನರೇಂದ್ರನೆಂಬ (ಮುಂದೆ ಸ್ವಾಮಿ ವಿವೇಕಾನಂದರು) ಒಬ್ಬ ಕಾಲೇಜು ವಿದ್ಯಾರ್ಥಿ ದಕ್ಷಿಣೇಶ್ವರದಲ್ಲಿ ನೆಲೆಸಿದ್ದ ಶ್ರೀರಾಮಕೃಷ್ಣರೆಡೆಗೆ ಬಂದನು. ಅವರನ್ನು ಹೀಗೆ ಪ್ರಶ್ನಿಸಿದನು: "ಮಹಾಶಯರೇ, ತಾವು ದೇವರನ್ನು ಕಂಡಿದ್ದೀರಾ?" ಒಂದು ಕ್ಷಣವೂ ತಬ್ಬಿಬ್ಬಾಗದೆ, ಶ್ರೀರಾಮಕೃಷ್ಣರು ಉತ್ತರವಿತ್ತರು, "ಹೌದು, ನಾನು ನಿನ್ನನ್ನು ನೋಡಿದಷ್ಟೇ, ಇದಕ್ಕಿಂತ ಇನ್ನೂ ಸ್ಪಷ್ಟವಾಗಿ, ದೇವರನ್ನು ನೋಡಿದ್ದೇನೆ." ತಾವು ಭಗವಂತನನ್ನು ಆತನಲ್ಲಿಯೂ ಹಾಗೂ ಎಲ್ಲ ಮಾನವ ಜೀವಿಗಳಲ್ಲಿಯೂ ಕಂಡಿದ್ದೇನೆಂದು ಮುಂದೊಮ್ಮೆ ನಡೆದ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ನರೇಂದ್ರನಿಗೆ ತಿಳಿಸುತ್ತಾರೆ. ಪ್ರಶ್ನೋತ್ತರ ರೂಪದ ಈ ಸಂಭಾಷಣೆಯ ಮೂಲಕ ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಇನ್ನೊಂದು ನೂತನ ಯುಗವನ್ನು ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಅನಾವರಣಗೊಳಿಸುತ್ತಾರೆ.

ಮೇಲಿನ ಪ್ರಶ್ನೆ ಮತ್ತು ಉತ್ತರವು ಸರಳರೂಪದ್ದೆಂದು ಕಂಡುಬಂದರೂ, ಯುಗನಿರ್ಮಾಪಕ ಮಹತ್ವವನ್ನು ಹೊಂದಿರುವುದು ನಿಸ್ಸಂದೇಹ. ಮೊದಲನೆಯದಾಗಿ, ಈ ಪ್ರಶ್ನೋತ್ತರವು ಭಗವಂತನ ಮೇಲೆ ಅಸಂಖ್ಯಾತ ಜನರು ಇರಿಸಿದ್ದ ಶ್ರದ್ಧೆಯನ್ನು ಪುನರುಜ್ಜೀವನಗೊಳಿಸಿತು. ಎರಡನೆಯದಾಗಿ, ಇದು ಧರ್ಮವನ್ನು ಧಾರ್ಮಿಕ ಗ್ರಂಥಗಳ ಸೀಮಾರೇಖೆ ಯಿಂದ ಬಿಡಿಸಿ, ಜಾಗತಿಕ ಧರ್ಮಗಳ ನಡುವಣ ಸಾಮರಸ್ಯದ ಸ್ಥಾಪನೆಗೆ ಎಡೆ ಮಾಡಿಕೊಟ್ಟಿತು. ಮೂರನೆಯದಾಗಿ, ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕತೆಯನ್ನು ಸಾಂಪ್ರದಾಯಿಕ ಧರ್ಮಗಳ ತೆಕ್ಕೆಯಿಂದ ಬೇರ್ಪಡಿ ಸಿದರು. ಆ ಮೂಲಕ ವ್ಯಕ್ತಿಯೊಬ್ಬನು ತನ್ನಾತ್ಮದ ಅಂತರಾಳದಲ್ಲಿ ಅನುಭವಿಸುವ, ಆತ್ಯಂತಿಕ ಸತ್ಯಕ್ಕಾಗಿನ ಸ್ವತಂತ್ರ ಹಾಗೂ ವ್ಯಕ್ತಿಗತ ಅನ್ವೇಷಣೆಯನ್ನಾಗಿ ಅದನ್ನು ರೂಪಿಸಿದರು. ಇನ್ನೂ ಮುಂದುವರಿದು, ಹಿಂದೆ ತಪಸ್ವಿಗಳ ಒಂದು ಸಣ್ಣ ಗುಂಪಿಗೆ ಸೀಮಿತವಾಗಿದ್ದ ಈ ಆಂತರಿಕ ಅನ್ವೇಷಣೆಯು ಎಲ್ಲ ಜನರಿಗೂ ಸಾಧ್ಯ ಮಾತ್ರವಲ್ಲ, ಪ್ರತಿಯೊಬ್ಬನ ಜೀವನದಲ್ಲಿಯೂ ಇದು ಅವಶ್ಯವಾದ ಆಯಾಮವಾಗಬೇಕು ಎಂದು ಅವರು ತೋರಿಸಿಕೊಟ್ಟರು. ಮತಗಳು, ಆಚರಣೆಗಳು ಮತ್ತು ಸಂಸ್ಥೆಗಳ ಸಂಕೀರ್ಣವಾಗಿದ್ದ ಧರ್ಮದಿಂದ ಹೀಗೆ ಆಧ್ಯಾತ್ಮಿಕತೆಯನ್ನು ಬೇರ್ಪಡಿಸಿದ್ದೇ ಕಾಲಾಂತರದಲ್ಲಿ ಒಂದು ವಿಶ್ವವ್ಯಾಪಕ ಆಧ್ಯಾತ್ಮಿಕ ಆಂದೋಲನವಾಗಿ ಅಭಿವೃದ್ಧಿ ಹೊಂದಿತು. ಇತ್ತೀಚಿನ ವರ್ಷಗಳಲ್ಲಿ, ಅದರಲ್ಲೂ ಪಾಶ್ಚಾತ್ಯದೇಶಗಳಲ್ಲಿ, ಅದು ಇನ್ನೂ ಹೆಚ್ಚಿನ ಶಕ್ತಿಶಾಲಿ ಬೆಳವಣಿಗೆಯನ್ನು ಕಾಣುತ್ತಲಿದೆ; 'ನವಯುಗದ ಆಂದೋಲನ', 'ಮತವಿಹೀನ ಆಧ್ಯಾತ್ಮಿಕತೆ' (Secular Spirituality), 'ಜಾಗತಿಕ ಆಧ್ಯಾತ್ಮಿಕತೆ' ಮತ್ತು 'ಆಧ್ಯಾತ್ಮಿಕ ಕ್ರಾಂತಿ' ಎಂಬ ಬಗೆಬಗೆಯ ಹೆಸರುಗಳನ್ನು ಪಡೆದುಕೊಂಡಿದೆ.

(ಮುಂದುವರಿಯುವುದು)

ಹಬ್ಬವೋ ಹಬ್ಬ

# ಮಕರ ಸಂಕ್ರಾಂತಿಯ ಮಹತ್ವ



ಸ್ವಾಮಿ ಕರುಣಾಕರಾನಂದ

**ಮಕರ ಸಂಕ್ರಾತಿಯು ಹಿಂದೂಗಳ ಒಂದು ಪ್ರಮುಖ ಹಬ್ಬವಾಗಿದೆ. ಇದು ಪ್ರಕೃತಿಯೊಡನೆ ಮಾನವನ ಸಾಮರಸ್ಯವನ್ನು ಪ್ರತಿಪಾದಿಸುವುದು. ಈ ಹಬ್ಬದ ಐತಿಹಾಸಿಕ, ಪೌರಾಣಿಕ ಹಾಗೂ ಖಗೋಳ ಶಾಸ್ತ್ರೀಯ ಆಯಾಮಗಳನ್ನು ನಿರ್ದಿಷ್ಟವಾಗಿ ನಮಗೆ ಪರಿಚಯಿಸಿರುವ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಸ್ತ್ರಗ್ರಂಥಗಳಲ್ಲಿ ಪಾಂಡಿತ್ಯ ಹೊಂದಿರುವ ಇವರು ಉತ್ತಮ ಭಾಷಣಕಾರರೂ ಹೌದು.**

ಭಾರತದಲ್ಲಿ ಎಷ್ಟು ಬಗೆಯ ಸಾಂಸ್ಕೃತಿಕ ವೈವಿಧ್ಯವಿದೆಯೊ ಅಷ್ಟು ಹಬ್ಬಗಳಿವೆ. ಆ ಹಬ್ಬಗಳು ಆಧ್ಯಾತ್ಮಿಕ, ವೈದಿಕ, ಪೌರಾಣಿಕ ಹಾಗೂ ಸ್ಥಳೀಯ ಲೋಕಾಚಾರಗಳ ಹಿನ್ನೆಲೆಯನ್ನು ಹೊಂದಿರುತ್ತವೆ. ಆ ಹಬ್ಬಗಳೆಲ್ಲ ಬಹಳ ಕಾಲದಿಂದ ಆಚರಣೆಯಲ್ಲಿದ್ದರೂ ಕಾಲಕ್ರಮೇಣ ಅವುಗಳ ಆಚರಣೆಯ ಸ್ವರೂಪವು ಅಲ್ಪವಾಗಿಯೋ ಅಥವಾ ಸಂಪೂರ್ಣವಾಗಿಯೋ ಬದಲಾಗಿದೆ. ಒಟ್ಟಿನಲ್ಲಿ, ಈ ಹಬ್ಬಗಳೆಲ್ಲ ಒಂದು ನಾಡಿನ ಜನರಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಸರೆಯನ್ನು ನೀಡುವುದರೊಂದಿಗೆ, ಆ ನಾಡಿನ ಸಮಸ್ತ ಜನತೆಯನ್ನೂ ಒಟ್ಟಿಗೆ ಬೆಸೆಯುವ ಮಹತ್ತರ ಕಾರ್ಯವನ್ನು ಮಾಡುತ್ತವೆ; ವರ್ಷವಿಡೀ ದುಡಿಯುವ ಮನಸ್ಸಿಗೆ, ದೇಹಕ್ಕೆ ಆಗಾಗ್ಗೆ ಉಲ್ಲಾಸವನ್ನೂ, ವಿಶ್ರಾಂತಿಯನ್ನೂ ನೀಡುತ್ತವೆ.

**ಸೂರ್ಯದೇವತೆಯ ಐತಿಹ್ಯ:** ಸೂರ್ಯನನ್ನು ಕೇವಲ ಭಾರತದಲ್ಲಿ ಮಾತ್ರವಲ್ಲ ವಿದೇಶದಲ್ಲೂ ಬಹಳ ಹಿಂದೆ ತಮ್ಮ ದೇವತೆಗಳಲ್ಲೊಬ್ಬನನ್ನಾಗಿ ಪೂಜಿಸುತ್ತಿದ್ದುದು ಕಂಡುಬರುತ್ತದೆ. ಜಪಾನಿನ ಸೂರ್ಯದೇವತೆ ಅಮತೆರಸು *(*Amaterasu) ಒಂದು ಸ್ತ್ರೀ ದೇವತೆ. ಹೆಬಾತ್ ಜನಾಂಗ ಸೂರ್ಯನನ್ನು ಅರಿನ್ನಾ(Arinna) ಎಂದೂ, ಸಿರಿಯಾ ಜನಾಂಗ ಹಿಟ್ಟೈಟ್(Hittite) ಎಂದೂ, ಗ್ರೀಕ್ ಹಾಗೂ ರೋಮನ್ ಜನಾಂಗಗಳು ಅವನನ್ನು ಅಪೋಲೋ (Appollo) (ಅಪೋಲೋಗಿಂತಲೂ ಮೊದಲು ಹೀಲಿಯಸ್ ಆ ಸ್ಥಾನದಲ್ಲಿದ್ದನು) ಎಂದೂ, ನಾರ್ಸ ಜನಾಂಗವು ಫ್ರೆಯ್‌ರ್ (Freyr) ಎಂದೂ, ಈಜಿಪ್ಟ್ ಜನಾಂಗವು ಅಮುನ್ ರಾ (Amun Ra) ಎಂದೂ, ಇಂಕಾ ಜನಾಂಗವು ಇಂಟಿ (Inti) ಎಂದೂ, ಪಶ್ಚಿಮ ಆಫ್ರಿಕಾ ಜನಾಂಗದವರು ಲಿಜ಼ಾ (Liza) ಎಂದೂ, ಸೆಲ್ಟ್ ಜನಾಂಗದವರು ಲುಹ್ (Lugh) ಎಂದೂ, ಮೆಸಪಟೋಮಿಯಾ ಜನಾಂಗದವರು ಉಟು(Utu) ಎಂದೂ, ಆಸ್ಟೆಕ್ ಜನಾಂಗದವರು ಟೋನಾಟಿವು (Tonatiuh) ಎಂದೂ ಪೂಜಿಸುತ್ತಿದ್ದುದು ಜಾಗತಿಕ ಧಾರ್ಮಿಕ ಇತಿಹಾಸದ ಅಧ್ಯಯನದಿಂದ ನಮಗೆ ತಿಳಿದುಬರುತ್ತದೆ. ಕಾಲಕ್ರಮದಲ್ಲಿ ಆ ಜನಾಂಗಗಳು ನಾಶವಾದಂತೆ ಅವುಗಳಿಗೆ ಸೇರಿದ ಆಚರಣೆಗಳೂ ಮರೆಯಾದವು; ಅಥವಾ ಕೆಲವೊಮ್ಮೆ ಬೇರೊಂದು ರೀತಿಯ ಆಚರಣೆಯ ಮೂಲಕ ಆಧುನಿಕ ನಾಗರಿಕತೆಯನ್ನು ಪ್ರವೇಶಿಸಿದವು. ಡಿಸೆಂಬರ್ ೨೫ ರಂದು ವಿಶ್ವದೆಲ್ಲೆಡೆ ಸಂಭ್ರಮದಿಂದ ಆಚರಿಸುವ ಸಾಂತಾ ಕ್ಲಾಸ್‌ನ ಪುಣ್ಯದಿನ ಮೊದಲು ಪೇಗನ್ನರ ಸೂರ್ಯದೇವತೆಯಾದ 'ಮಿತ್ರ' ನ ಜನ್ಮದಿನಾಚರಣೆಯಾಗಿತ್ತು; ಅನಂತರ ಅದನ್ನು 'ಏಸುವಿನ ಜನ್ಮದಿನಾಚರಣೆ'ಯೆಂದು ಕ್ರೈಸ್ತರು ಅಳವಡಿಸಿಕೊಂಡರು ಎಂದು ಡಾರ್ವಿನ್ ಫಿಶ್ ಎಂಬ ವಿದ್ವಾಂಸರು Christmas: A Biblical Perspective ಎಂಬ ಗ್ರಂಥದಲ್ಲಿ ಬರೆಯುತ್ತಾರೆ. (Encyclopedia Americana ದ ೬ನೆ ಭಾಗ ಪುಟ ೬೨೩ ರಲ್ಲಿಯೂ ಇದಕ್ಕೆ ಸಂಬಂಧಿಸಿದ ಮಾಹಿತಿ ಲಭ್ಯ.)



**ಸಂಕ್ರಾಂತಿ ಅಥವಾ ಸಂಕ್ರಮಣ:** ಭಾರತದಲ್ಲಂತೂ ಸೂರ್ಯನು ವೇದಕಾಲದಿಂದಲೇ ಪೂಜಿಸಲ್ಪಡುತ್ತಿದ್ದ ದೇವತೆ. ಸೂರ್ಯನಿಗೆ ಸಂಬಂಧಿಸಿದ ಕೆಲವು ಮುಖ್ಯವಾದ ಇನ್ನಿತರ ಆಚರಣೆಗಳೆಂದರೆ 'ಛತ್‌ಪೂಜೆ', 'ರಥಸಪ್ತಮಿ' ಹಾಗೂ 'ಸಾಂಬ ದಶಮಿ' ಮುಂತಾದವು. ಜ್ಯೋತಿಷ ಶಾಸ್ತ್ರದ ಪ್ರಕಾರ ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವ ಕಾಲಾವಧಿಗೆ 'ಸಂಕ್ರಮಣ'ವೆನ್ನುವರು. ಹಾಗೆ ನೋಡಿದರೆ, ಪ್ರತಿಯೊಂದು ಗ್ರಹವೂ ಒಂದೊಂದು ರಾಶಿಯನ್ನು ದಾಟಿ ಇನ್ನೊಂದು ರಾಶಿಯನ್ನು ಪ್ರವೇಶಿಸಿದಾಗ 'ಸಂಕ್ರಾಂತಿ' ಯಾಗುತ್ತದೆ. ಪುರಾತನ ಜ್ಯೋತಿಷ ಗ್ರಂಥಗಳಲ್ಲಿ ಅವುಗಳನ್ನೆಲ್ಲ ಪುಣ್ಯಕಾಲಗಳೆಂದು ಪರಿಗಣಿಸಲಾಗಿದೆ. ಆದರೂ, 'ಸ್ಮೃತಿಕೌಸ್ತುಭ'ಕಾರರಂತಹ ಅರ್ವಾಚೀನ ಸ್ಮೃತಿಕಾರರು ಸಂಕ್ರಾಂತಿಯೆಂದರೆ, 'ರವಿಸಂಕ್ರಾಂತಿ' ಯೆಂದೇ ಪರಿಗಣಿಸುತ್ತಾರೆ. ಆಧುನಿಕ ಖಗೋಳ ವಿಜ್ಞಾನದ ಪ್ರಕಾರ ಡಿಸೆಂಬರ್ ೨೧ ರಂದೇ 'ಉತ್ತರ ಸಂಕ್ರಮಣ' ಆರಂಭವಾಗುತ್ತದೆ. ಭಾರತೀಯ ಪಂಚಾಂಗದ ರೀತ್ಯಾ ಪ್ರಸ್ತುತ ಜನವರಿ ೧೫ಕ್ಕೆ ಪ್ರತಿ ವರ್ಷ 'ಮಕರಸಂಕ್ರಾಂತಿ' ಬೀಳುತ್ತದೆ. ಹೀಗೆ ಭಾರತೀಯರು ನಿಜವಾದ ಸಂಕ್ರಾಂತಿಗೆ ಸುಮಾರು ೨೩ ದಿವಸಗಳು ಹಿಂದಿದ್ದಾರೆಂದು ಪ್ರೊ. ಪಿ.ವಿ.ಕಾಣೆಯವರ ಅಭಿಮತ. ಪ್ರತಿ ೮೦ ವರ್ಷಗಳಿಗೊಮ್ಮೆ ಸಂಕ್ರಾಂತಿಯ ದಿನ ಒಂದು ದಿನ ಮುಂದಕ್ಕೆ ಹೋಗುತ್ತದೆ. ಈ ಲೆಕ್ಕದ ಪ್ರಕಾರ ಸುಮಾರು ೫ರಿಂದ ೬ ಸಾವಿರ ವರ್ಷಗಳ ನಂತರ ಮಕರ ಸಂಕ್ರಾಂತಿ ಮೇ

ತಿಂಗಳಿನಲ್ಲಿ ಬರುತ್ತದೆ. ಸೂರ್ಯನು ಯಾವ ರಾಶಿಗೆ ಬರುವನೋ ಆ ಸಂಕ್ರಾಂತಿಗೆ ಆಯಾ ರಾಶಿಯ ಹೆಸರನ್ನು ಕಲ್ಪಿಸುತ್ತಾರೆ. ಹೀಗೆ ಹನ್ನೆರಡು ರಾಶಿಗಳನ್ನು ದಾಟಿದಾಗ ಹನ್ನೆರಡು ಸಂಕ್ರಮಣಗಳಾಗುತ್ತವೆ. ಅವುಗಳಲ್ಲೆಲ್ಲ 'ಮಕರಸಂಕ್ರಾಂತಿ' ಮತ್ತು 'ಕರ್ಕಾಟಕ ಸಂಕ್ರಾಂತಿ'ಗಳು ಮುಖ್ಯವೆಂದು ಪರಿಗಣಿಸಲ್ಪಟ್ಟಿವೆ. ಮಕರಸಂಕ್ರಾಂತಿಯಲ್ಲಿ ಸೂರ್ಯನು ಧನು ರಾಶಿಯಿಂದ ಮಕರಕ್ಕೆ ಪ್ರವೇಶಿಸುತ್ತಾನೆ. ಆಗಿನಿಂದ **'ಉತ್ತರಾಯಣ'** ಅಥವಾ **'ಉದಗಯನ ಕಾಲ'** ಆರಂಭವಾಗುತ್ತದೆ. ಮಿಥುನದಿಂದ ಕರ್ಕಾಟಕಕ್ಕೆ ಸೂರ್ಯನು ಪ್ರವೇಶಿಸಿದಾಗ 'ಕರ್ಕಾಟಕ ಸಂಕ್ರಾಂತಿ'ಯೆನಿಸಿಕೊಳ್ಳುತ್ತದೆ. ಅಂದಿನಿಂದ **'ದಕ್ಷಿಣಾಯನ ಕಾಲ'** ಆರು ತಿಂಗಳು ಇರುತ್ತದೆ. ಉತ್ತರಾಯಣವು ದೇವತೆಗಳಿಗೂ, ದಕ್ಷಿಣಾಯನವು ಪಿತೃಗಳಿಗೂ 'ಹಗಲಿನ ಕಾಲ' ಎನಿಸಿವೆ.

ಈ ಹನ್ನೆರಡು ಸಂಕ್ರಾಂತಿಗಳು ತಾವು ಉಂಟಾಗುವ 'ದಿನ'ಕ್ಕೆ ಅನುಗುಣವಾಗಿ, ಕೆಲವು ನಕ್ಷತ್ರಗಳ ಸಂಯೋಗದ ದೆಸೆಯಿಂದ ಏಳು ವಿಧವಾಗಿ ವಿಭಾಗಿಸಲ್ಪಟ್ಟಿವೆ. ಮಂದಾ, ಮಂದಾಕಿನೀ, ಧ್ವಾಂಕ್ಷೀ, ಘೋರಾ, ಮಹೋದರೀ, ರಾಕ್ಷಸೀ ಮತ್ತು ಮಿಶ್ರಿತಾ ಎಂಬುವೇ ಆ ಏಳು ಹೆಸರುಗಳು. ಭಾನುವಾರ ಉಂಟಾಗುವ ಸಂಕ್ರಾಂತಿಗೆ 'ಘೋರಾ' ಎಂದು ಹೆಸರು. ಸೋಮವಾರದಂದು ಉಂಟಾಗುವ ಸಂಕ್ರಾಂತಿಗೆ 'ಧ್ವಾಂಕ್ಷೀ' ಎಂದು ಹೆಸರು. ಮಂಗಳವಾರದಂದು ಉಂಟಾಗುವ ಸಂಕ್ರಾತಿಗೆ 'ಮಹೋದರೀ' ಎಂದು ಹೆಸರು. ಬುಧವಾರದ ಸಂಕ್ರಾತಿಗೆ 'ಮಂದಾಕಿನೀ' ಎಂದು ಕರೆಯುತ್ತಾರೆ. ಸಂಕ್ರಾತಿ ಗುರುವಾರದಂದು ಉಂಟಾದರೆ ಅದನ್ನು 'ಮಂದಾ' ಎಂದೂ, ಶುಕ್ರವಾರದಂದು ಉಂಟಾದರೆ ಅದನ್ನು 'ಮಿಶ್ರಿತಾ' ಎಂದೂ ಹಾಗೂ ಶನಿವಾರದಂದು ಬಂದರೆ ರಾಕ್ಷಸೀ ಎಂದೂ ಹೆಸರುಗಳನ್ನು ಕಲ್ಪಿಸಿದ್ದಾರೆ (ಪ್ರಸ್ತುತ ೨೦೧೧ರಂದು ಬಂದಿದ್ದ ಸಂಕ್ರಾಂತಿ 'ರಾಕ್ಷಸೀ ಸಂಕ್ರಾಂತಿ'). ಇವುಗಳು ಪುಣ್ಯಕಾಲವನ್ನು ನಿರ್ಣಯಿಸುವಾಗ, ಫಲವನ್ನು ನಿರ್ಣಯಿಸುವಾಗ ಉಪಯೋಗಕ್ಕೆ ಬರುತ್ತವೆ.

**ಸಂಕ್ರಾಂತಿಯ ಪೌರಾಣಿಕ ಮಹತ್ವ :** ಸಂಕ್ರಾಂತಿಯನ್ನು ಕಾಲಕ್ರಮೇಣ ದುರ್ಗೆಯ ಅಂಶವನ್ನಾಗಿ ಬಿಂಬಿಸಲಾಯಿತೆಂದು ಪ್ರೊ. ಪಿ.ವಿ. ಕಾಣೆಯವರ ಅಭಿಪ್ರಾಯ. ದೇವಿಯೇ ಕಾಲಸ್ವರೂಪದಿಂದ ವರ್ಷ, ಅಯನ, ಋತು, ಮಾಸ, ಪಕ್ಷ, ದಿನ ಮೊದಲಾದ ಕಾಲ ವಿಭಾಗಗಳಿಂದ ಅಭಿವ್ಯಕ್ತಗೊಂಡು, ಆ ಕಾಲಗಳಲ್ಲಿ ನಡೆಸಿದ ಧರ್ಮಾಧರ್ಮ ಕಾರ್ಯಗಳಿಗೆ ಫಲವನ್ನು ನೀಡುವಳೆಂಬ ಶ್ಲೋಕ ಗಳನ್ನು ಹೇಮಾದ್ರಿಯೆಂಬ ಸ್ಮೃತಿಕಾರನು 'ದೇವಿಪುರಾಣ' ವೆಂಬ ಗ್ರಂಥದಿಂದ ಉದ್ಧರಿಸುತ್ತಾನೆ. ಸಂಕ್ರಾಂತಿಯೆಂಬ ದೇವತೆಯು ಸಂಕರಾಸುರನೆಂಬ ದೈತ್ಯನನ್ನು ಕೊಂದ ದಿನವೇ ಸಂಕ್ರಾತಿಯೆಂದು ಲೋಕೋಕ್ತಿ. ಇದರ ಮಾರನೆಯ ದಿವಸ ಹೆಣ್ಣು ದೇವತೆಯು ಕಿಂಕರಾಸುರನನ್ನು ಕೊಂದಳೆಂದೂ ಆದ್ದರಿಂದ ಆ ದಿನವನ್ನು ಕಿಂಕ್ರಾಂತವೆಂದೂ ಅಥವಾ ಕರಿದಿನವೆಂದೂ ಕರೆಯುತ್ತಾರೆಂದೂ ಹೇಳುವ ಇನ್ನೊಂದು ದಂತಕತೆ ಪ್ರಚಲಿತವಿದೆ. ಇದಕ್ಕೆ ಆಧಾರವೇನೆಂಬುದು ತಿಳಿದಿಲ್ಲ. ಆಧುನಿಕ ಪಂಚಾಂಗಗಳಲ್ಲಿ ಈ ಸಂಕ್ರಾಂತಿ ಪುರುಷನ ವರ್ಣನೆಯನ್ನು ಹೀಗೆ ಕೊಟ್ಟಿದೆ: ೩ ತಲೆ, ೨ ಮುಖ, ೫ ಬಾಯಿ, ೩ ಕಣ್ಣುಗಳಿರುವ ಆ ಪುರುಷನಿಗೆ ಜೋಲಾಡುವ ಕಿವಿಗಳಿವೆ. ಹುಬ್ಬು, ಹಲ್ಲುಗಳು ಕೆಂಪು ಬಣ್ಣದ್ದಾಗಿದ್ದು, ಮೂಗು ಉದ್ದವಾಗಿದೆ. ೮ ತೋಳುಗಳು, ೨ ಕಾಲು, ಕಪ್ಪು ಬಣ್ಣದ ವಿಕಾರ ರೂಪವಿದೆ. ಶರೀರವು ಅರ್ಧ ಹೆಣ್ಣು, ಅರ್ಧ ಗಂಡು. ವಾಯವ್ಯ ದಿಕ್ಕಿಗೆ ಹೊರಟ ಆ ಪುರುಷ ಪಶ್ಚಿಮಕ್ಕೆ ದೃಷ್ಟಿಯಿರಿಸಿದ್ದಾನೆ. ಆತನು ಯಾವ ದಿಕ್ಕಿನಿಂದ ಬರುತ್ತಾನೋ, ಆ ದಿಕ್ಕಿನ ಜನರಿಗೆ ಸುಖವುಂಟಾಗುತ್ತದೆ ಹಾಗೂ ಯಾವ ದಿಕ್ಕಿನೆಡೆಗೆ ಹೋಗುವನೋ ಆ ದಿಕ್ಕಿನ ಜನರಿಗೆ ದುಃಖವುಂಟಾಗುತ್ತದೆ. ಆತನು ಯಾವುದನ್ನು ಸ್ವೀಕರಿಸುವನೋ ಅದರ ಬೆಲೆ ಏರುತ್ತದೆ ಅಥವಾ ಅದು ಹಾಳಾಗುತ್ತದೆ ಮತ್ತು ಯಾವ ಕಡೆ ಆ ಪುರುಷ ದೃಷ್ಟಿ ಹಾಕುವನೋ, ಅಲ್ಲಿ ಅನಿಷ್ಟವುಂಟಾಗುತ್ತದೆ. ಆ ಪುರುಷನ ವಾಹನ ಎಮ್ಮೆ. ತನ್ನ ಮೈಗೆ ಗೋರೋಚನವನ್ನು ಲೇಪಿಸಿಕೊಂಡಿರುವ ಪುರುಷನು ಕಪ್ಪು ಬಟ್ಟೆಯುಟ್ಟು, ತಲೆಯಲ್ಲಿ ಕನ್ನೈದಿಲೆಯನ್ನು ಮುಡಿದು, ಕೈಯಲ್ಲಿ ವಜ್ರಾ ಯುಧ ಧರಿಸಿರುತ್ತಾನೆ. ಆತನ ತಲೆಯ ಮೇಲೆ ನವಿಲುಗರಿಯ ಛತ್ರಿಯಿರುತ್ತದೆ (ಒಂಟಿಕೊಪ್ಪಲ್ ಪಂಚಾಂಗದ ಪ್ರಕಾರ).

**ಸಂಕ್ರಾಂತಿಯ ಆಚರಣೆಯ ವಿಧಾನ:** ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಯನ್ನು ಪ್ರವೇಶಿಸುವ ಕಾಲ ಅತ್ಯಂತ 'ಸೂಕ್ಷ್ಮ'ವಾದದ್ದು. ಇದರ ಸಹಾಯದಿಂದ ಪುಣ್ಯಕಾಲವನ್ನು ನಿರ್ಣಯಿಸಲು ಹಾಗೂ ಆ ಸಮಯದಲ್ಲಿ ಪುಣ್ಯಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ. ಹೀಗಾಗಿ ಪುಣ್ಯಕಾಲವನ್ನು ನಿರ್ಧರಿಸುವಾಗ ಸಂಕ್ರಾಂತಿಯ ಮೊದಲಿನ ಹಾಗೂ ನಂತರದ ಕಾಲವನ್ನೂ ಸ್ಮೃತಿಗಳು ಗಣನೆಗೆ ತೆಗೆದುಕೊಂಡಿವೆ. ಅವುಗಳ ಪ್ರಕಾರ ಪುಣ್ಯಕಾಲವನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಸಂಕ್ರಾಂತಿಯ ಮೊದಲು ಮತ್ತು ನಂತರದ ಮೂರು, ನಾಲ್ಕು, ಐದು, ಏಳು, ಎಂಟು, ಒಂಭತ್ತು ಅಥವಾ ಹನ್ನೆರಡು ಘಟಿಕಗಳೇ ಆ ಏಳು ವಿಭಾಗ ಗಳು (ಒಂದು ಘಟಿಕಾ ಎಂದರೆ ಸುಮಾರು ೨೪ ನಿಮಿಷಗಳು). ಒಂದು ವೇಳೆ ಈ ಕಾಲದಲ್ಲಿಯೂ ಒಬ್ಬ ಪುಣ್ಯಕಾರ್ಯಗಳನ್ನು ಮಾಡಲು ಅಸಮರ್ಥನಾದರೆ, ಮೂವತ್ತು ಘಟಿಕಗಳ ಸಮಯದ ಒಳಗಾದರೂ ಮಾಡಬಹುದು ಎಂದು ಧರ್ಮಗ್ರಂಥಗಳು ಹೇಳುತ್ತವೆ.

ಇವುಗಳಲ್ಲಿ ಯಾವ ಸಮಯಾವಧಿ ಕಡಮೆಯಿರುವುದೋ, ಆ ಅವಧಿಯು ಪುಣ್ಯಕಾರ್ಯಗಳನ್ನು ಮಾಡಲು ಅಷ್ಟು ಪ್ರಶಸ್ತವಾಗಿರುತ್ತದೆ. ಈ ಪುಣ್ಯಕಾಲದಲ್ಲಿ ಶ್ರದ್ಧಾಳು ಜನರು ಗಂಗಾ, ಕಾವೇರಿ ಮೊದಲಾದ ಪವಿತ್ರ ನದಿಗಳಲ್ಲಿ ಸ್ನಾನ ಮಾಡುತ್ತಾರೆ;